**ದಿನಾಂಕಃ 14.07.2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ಹೆಚ್.ಆರ್. ವಕೀಲರಿಂದಃ**

ದಾವಾ ಸ್ವತ್ತು ಮೂಲತಃ ಸುಂಕಪ್ಪರವರಿಗೆ ಸೇರಿದ್ದು. ಸದರಿ ಸುಂಕಪ್ಪರವರಿಗೆ ದಾವಾ ಸ್ವತ್ತು ಪಿತ್ರಾರ್ಜಿತವಾಗಿ ಬಂದಿರುತ್ತದೆ. ಸದರಿ ಸುಂಕಪ್ಪರವರಿಗೆ 3 ಜನ ಮಕ್ಕಳು ಅದರಲ್ಲಿ 1 ನೇ ರಂಗಪ್ಪ, 2 ನೇ ಗುಂಡಪ್ಪ ಮತ್ತು 3 ನೇ ಚನ್ನಪ್ಪ ಆಗಿರುತ್ತಾರೆ. 2 ನೇ ದಾವಾ ಸ್ವತ್ತು ಸುಂಕಪ್ಪನವರಿಗೆ ಯಾವ ರೀತಿ ಬಂದಿತ್ತು ಎಂದು ಗೊತ್ತಿಲ್ಲ. 1 ನೇ ದಾವಾ ಸ್ವತ್ತು ಸುಂಕಪ್ಪನವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ದಾವಾ ಸ್ವತ್ತು ಸುಂಕಪ್ಪನವರಿಗೆ ಪಿತ್ರಾರ್ಜಿತವಾಗಿ ಬಂದಿರುವ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಗಂಗಮ್ಮನಿಗೆ ರಂಗಪ್ಪ, ಗುಂಡಪ್ಪ ಮತ್ತು ಚನ್ನಪ್ಪರವರಿಂದ ಖರೀದಿ ಮಾಡಿ ಬಂದಂತ ಆಸ್ತಿ ಆಗಿರುತ್ತದೆ. ಗಂಗಮ್ಮನ ಗಂಡನ ಹೆಸರನು ಚನ್ನಪ್ಪ. ದಾವಾ ಸ್ವತ್ತು ಜಂಟಿ ಕುಟುಂಬದ ಆಸ್ತಿ ಎಂದರೆ ಸರಿ. ಗಂಗಮ್ಮನಿಗೆ ರಂಗಪ್ಪ ಮತ್ತು ಗುಂಡಪ್ಪ ಯಾವುದೇ ಕ್ರಯ ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಸುಂಕಪ್ಪನ ಮೂರು ಜನ ಮಕ್ಕಳಾದ ರಂಗಪ್ಪ, ಗುಂಡಪ್ಪ ಮತ್ತು ಚನ್ನಪ್ಪನ ಹೆಸರಿಗೆ ದಾವಾ ಸ್ವತ್ತಿನ ಖಾತೆ ಮತ್ತು ಪಹಣಿ ಇರುವ ಬಗ್ಗೆ ಗೊತ್ತಿಲ್ಲ. ಚನ್ನಪ್ಪನವರು ಗಂಗಮ್ಮನವರಿಗೆ ಬರೆದು ಕೊಟ್ಟಿರುವ ಕ್ರಯ ಪತ್ರದ ಸ.ನಂ.226(ಎ) ಮತ್ತು (ಬಿ)ರ ವಿಸ್ತೀರ್ಣ 10 ಎಕರೆ ಜಮೀನಿಗೆ ಚೆಕ್ಕುಬಂದಿ ಪೂ-ಚೌಡಪ್ಪನ ಜಮೀನು, ಪ-ಸರ್ಕಾರಿ ಹಳ್ಳ, ಉ-ವೆಂಕಟಸ್ವಾಮಿ ಮತ್ತು ಕದಿರಪ್ಪ ಮತ್ತು ದ-ಪೂಜಾರಿ ಶಿವಣ್ಣ ಇರುತ್ತಾರೆ.

2. ಗಂಗಮ್ಮ ಎಂಬುವವರು ಬಸವರಾಜ ಎಂಬುವವರಿಗೆ 2 ಆಸ್ತಿಗಳ ಸ.ನಂ.226(ಎ) ಮತ್ತು (ಬಿ) ಮಾರಾಟ 1981 ರಲ್ಲಿ ಮಾಡಿರುತ್ತಾರೆ. ನಾನು ಕ್ರಯ ಪತ್ರ ನೋಡಿರುತ್ತೇನೆ. ನಾನು ಹೇಳಿದಂತೆ ಗಂಗಮ್ಮರವರು ಬಸವರಾಜಪ್ಪರವರಿಗೆ ಯಾವುದೇ ಆಸ್ತಿ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಗಂಗಮ್ಮರವರು ಆಸ್ತಿಯನ್ನು ಮಾರಾಟ ಮಾಡಲು ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಗಂಗಮ್ಮ ಮಾರಾಟ ಮಾಡಿದ ಆಸ್ತಿಯ ಚೆಕ್ಕುಬಂದಿ ಪೂ-ನಲ್ಲನ ಬೋವಿ ಜಮೀನು, ಪ-ತಿಪ್ಪನ ಜಮೀನು, ಉ-ಯಲ್ಲಪ್ಪ

ಮತ್ತು ದ-ವೆಂಕಟಪ್ಪ ಜಮೀನು ಎಂದರೆ ಸರಿಯಲ್ಲ. ಬಸವರಾಜಪ್ಪನವರು ಲಕ್ಷ್ಮಮ್ಮನಿಗೆ ಮಾರಾಟ ಮಾಡಿರುತ್ತಾರೆ, ಆದರೆ ಲಕ್ಷ್ಮಮ್ಮನ ಗಂಡನ ಹೆಸರು ಗೊತ್ತಿಲ್ಲ.

3. ನಾನು 2 ದಾವಾ ಆಸ್ತಿಗಳ ವಿಸ್ತೀರ್ಣ 10 ಎಕರೆಯ ಸ.ನಂ.560 ಮತ್ತು 561 ನ್ನು ಈರಮ್ಮನ ಕಡೆಯಿಂದ ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡುವ ಮೊದಲು ದಾಖಲೆಗಳಾದ ಡಿಕ್ರಿ ಮತ್ತು ಖಾತೆಗಳ ಎಂ.ಆರ್. ಪರಿಶೀಲಿಸಿರುತ್ತೇನೆ. ನನ್ನ ಕ್ರಯ ಪತ್ರದಲ್ಲಿ ಡಿಕ್ರಿ ಮತ್ತು ಮರಣ ಶಾಸನದಲ್ಲಿ ಬರೆದಿರುವ ಚೆಕ್ಕುಬಂದಿಯನ್ನು ನಮೂದು ಮಾಡಿರುತ್ತೇನೆ. ಗಂಗಮ್ಮರವರು ಯಾವುದೇ ಕ್ರಯಪತ್ರವನ್ನು ಬಸವರಾಜಪ್ಪ, ಈರಮ್ಮರವರಿಗೆ ಬರೆದುಕೊಡದೇ ಇದ್ದರು ಸಹ ಜಮೀನನ್ನು ಕಬಳಿಸಲು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈರಮ್ಮರವರಿಗೆ ದಾವಾ ಆಸ್ತಿ ಮಾರಾಟ ಮಾಡಲು ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಈರಮ್ಮರವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಮೊದಲಿನಿಂದಲೂ ವಾದಿಗಳೇ ಸ್ವಾಧೀನದಲ್ಲಿರುತ್ತಾರೆ ಎಂದೆರ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಕೊಳವೆ ಬಾವಿ ಗಂಗಮ್ಮರವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.